


ಜೆಎಸ್‌ಎಸ್ ಮಹಾವಿದ್ಯಾಪೀಠ

## ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ

ಮಹಾತ್ಮ ಗಾಂಧಿ ರಸ್ತೆ, ಮೈಸೂರು – 570004

# ಕಾಕ್ಲಿಯರ್ ಇಂಪ್ಲಾಂಟ್ : ಕಾಳಜಿ ಮತ್ತು ನಿರ್ವಹಣೆ

"ಉತ್ತಮ ಶ್ರವಣ,
ಉತ್ತಮ ಜೀವನ."



**ಸಂಪರ್ಕಿಸಿ**


ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ,
ಎಂ.ಜಿ. ರಸ್ತೆ, ಮೈಸೂರು – 570004

jssish@jssonline.org
jssishmys@rediffmail.com

0821-2548229, 0821-2335014

# ಕಾಳಜಿ ಮತ್ತು ನಿರ್ವಹಣೆ

## ದಿನನಿತ್ಯದ ಚಟುವಟಿಕೆಗಳು

- ಕಾಕ್ಲಿಯರ್ ಇಂಪ್ಲಾಂಟ್ ಭಾಗಗಳಾದ ಪ್ರೊಸೆಸರ್, ಕಾಯಿಲ್, ಕೇಬಲ್ ಮತ್ತು ಮೈಕ್ರೊಫೋನ್ ಪೋರ್ಟ್ ಅನ್ನು ಒಣ-ಮೃದುವಾದ ಬಟ್ಟೆಯಿಂದ ಒರೆಸಿ ಸ್ವಚ್ಛಗೊಳಿಸಿ.



- ಕೇಸರಿ ಬಣ್ಣದ ಲೈಟ್ ಹಸಿರು ಬಣ್ಣಕ್ಕೆ ತಿರುಗುವವರೆಗೆ ಬ್ಯಾಟರಿಯನ್ನು ಚಾರ್ಜ್ ಮಾಡಿ.



- ರಾತ್ರಿಯವೇಳೆಯಲ್ಲಿ ನಿಮ್ಮ ಪ್ರೊಸೆಸರ್ ಅನ್ನು ಕಂಪನಿ ನೀಡಿರುವ ಡ್ರೈ ಏಡ್ ಕಿಟ್ ನಲ್ಲಿಯೇ ಇಡಿ.



- ಬ್ಯಾಟರಿಗಳು ಮತ್ತು ಬ್ಯಾಟರಿ ಕಾಂಟ್ಯಾಕ್ಟ್ ಗಳನ್ನು ಒಣ-ಮೃದುವಾದ ಬಟ್ಟೆಯಿಂದ ಒರೆಸಿ ಸ್ವಚ್ಛಗೊಳಿಸಿ.



- ನುಲಿದಿರುವ ಕೇಬಲ್ ಅನ್ನು ಸರಿಪಡಿಸುವುದರಿಂದ ಕೇಬಲ್ ತುಂಡಾಗುವುದನ್ನು ತಡೆಯಬಹುದು.

- ಸಾಧನವನ್ನು ಧರಿಸುವಾಗ ತಲೆಯ ಮೇಲೆ ಇಂಪ್ಲಾಂಟ್ ಸುತ್ತಲಿನ ಚರ್ಮ ಕೆಂಪಾಗಿದೆಯೋ ಇಲ್ಲವೋ ಎಂದು ಪ್ರತಿದಿನ ಪರಿಶೀಲಿಸಿ.



## ವಾರದ ಚಟುವಟಿಕೆಗಳು

- ಬ್ಯಾಟರಿ/ಚಾರ್ಜರ್ ಸಾಕೆಟ್‌ಗಳನ್ನು ಒರೆಸಿ: ಬ್ಯಾಟರಿ ಹೋಲ್ಡರ್‌ನಲ್ಲಿ ಧೂಳು ಕಂಡುಬಂದರೆ, ಬ್ಯಾಟರಿಗಳನ್ನು ಹೊರತೆಗೆದು ಕಾಟನ್ ಬಡ್‌ನಿಂದ ಕಾಂಟ್ಯಾಕ್ಟ್‌ಗಳನ್ನು ಸ್ವಚ್ಛಗೊಳಿಸಿ.

- ಶಬ್ದವನ್ನು ಪರಿಶೀಲಿಸಲು ಮಾನಿಟರ್ ಇಯರ್‌ಫೋನ್‌ಗಳನ್ನು ಬಳಸಿ. ಪ್ರೊಸೆಸರ್ ಆನ್ ಆಗಿದೆಯೇ ಎಂದು ಖಚಿತಪಡಿಸಿಕೊಳ್ಳಿ, ಕವರ್ ಅನ್ನು ಎತ್ತಿ ಮತ್ತು ಮಾನಿಟರಿಂಗ್ ಇಯರ್‌ಫೋನ್‌ಗಳನ್ನು ಪ್ಲಗ್ ಇನ್ ಮಾಡಿ ನಂತರ “ಆ,ಇ,ಉ,ಸ,ಶ್,ಮ್” ಶಬ್ದ ಮಾಡಿ ಕೇಳಿಸಿಕೊಂಡು ಪರಿಶೀಲಿಸಿ .



- ಕಾಕ್ಲಿಯರ್ ಇಂಪ್ಲಾಂಟ್ ಅನ್ನು ಪರೀಕ್ಷಿಸಲು ಕಾಯಿಲ್ ವ್ಯಾಂಡ್ (Coil Wand) ಬಳಸಿ. ಕಾಯಿಲ್ ವ್ಯಾಂಡ್ ಅನ್ನು ಕಾಯಿಲ್ ಮೇಲೆ ಇರಿಸಿದಾಗ ಹಸಿರು ಲೈಟ್ ಬಂದರೆ ಕಾಕ್ಲಿಯರ್ ಇಂಪ್ಲಾಂಟ್ ಕೆಲಸ ಮಾಡುತ್ತಿದೆ ಎಂದರ್ಥ .



- ಬ್ಯಾಟರಿ ಮಾಡ್ಯೂಲ್ ಮತ್ತು ಮ್ಯಾಗ್ನೆಟ್ಗಳ ಕಾಂಟ್ಯಾಕ್ಟ್ ಪಾಯಿಂಟ್ಸ್ ಗಳನ್ನು ಸ್ವಚ್ಛಗೊಳಿಸಿ .

## ಮಾಸಿಕ/ತಿಂಗಳಿನ ಚಟುವಟಿಕೆಗಳು

- ಪ್ರತಿ 2 (ಎರಡು) ತಿಂಗಳಿಗೊಮ್ಮೆ ಡ್ರೈ- ಬ್ರಿಕ್‌ಅನ್ನು ಬದಲಾಯಿಸಿ.

- ಪ್ರತಿ 3(ಮೂರು) ತಿಂಗಳಿಗೊಮ್ಮೆ ಮೈಕ್ರೋಫೋನ್ ಪ್ರೊಟೆಕ್ಟರ್ಸ್ ಅನ್ನು ಬದಲಾಯಿಸಿ.



- ಇಯರ್ ಹುಕ್ ಅಥವಾ ರಿಟೆಂಷನ್ ಆಕ್ಸೆಸರೀಸ್ ಸಡಿಲವಾಗುತ್ತಿವೆಯೇ ಅಥವಾ ಸವೆತದ ಲಕ್ಷಣಗಳನ್ನು ತೋರಿಸುತ್ತಿದೆಯೇ ಎಂದು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಬದಲಾಯಿಸಿ.

